**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ *6/2014***

ದಿನಾಂಕಃ ***15.06.2023***
*(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)*

ಪ್ರಾ.ಸಾಃ *2* *(ಚಾ.ಸಾ.3 )*

| | | |
|---|---|---|
| ಹೆಸರು | ಃ | ಎಂ ಮಂಜುನಾಥ |
| ತಂದೆಯ ಹೆಸರು | ಃ | ಮುನಿಸ್ವಾಮಾಚಾರ್ |
| ವಯಸ್ಸು | ಃ | *54* ವರ್ಷ |
| ಉದ್ಯೋಗ | ಃ | ಪ್ರಥಮ ದರ್ಜೆ ಸಹಾಯಕರು ತಾಲ್ಲೂಕು ಕಛೇರಿ ರಾಮನಗರ |
| ವಾಸ ಸ್ಥಳ | ಃ | **ರಾಮನಗರ** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು *2012* ರಲ್ಲಿ ರಾಮನಗರ ತಾಲ್ಲೂಕು ಕಛೇರಿಯಲ್ಲಿ ಆರ್ ಆರ್ ಟಿ ಸೆಕ್ಷನ್ ನಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

*2.* ದಿ.*22.11.2012* ರಂದು ನಾನು ಕಛೇರಿಯಲ್ಲಿದ್ದಾಗ ನಮ್ಮ ಮೇಲಾಧಿಕಾರಿಗಳು ನನ್ನನ್ನು ಕರೆದು ಲೋಕಾಯುಕ್ತ ಪೋಲೀಸರು ಒಂದು ಕೇಸಿನಲ್ಲಿ ಪಂಚರನ್ನು ಕಳುಹಿಸಿಕೊಡಿ ಎಂದು ಕೇಳಿದ್ದಾರೆ ನೀವು ಹೋಗಿ ತನಿಖೆಗೆ ಸಹಕರಿಸಿ ಅಂತ ಹೇಳಿದರು ಮದ್ಯಾಹ್ನ *2.30* ಗಂಟೆಗೆ ನಾನು ರಾಮನಗರ ಲೋಕಾಯುಕ್ತ ಕಛೇರಿಗೆ ಹೋಗಿ ಪೋಲೀಸ್ ನೀರೀಕ್ಷಕರಾದ ಬೆಂಗಲಿಂಗಯ್ಯ ಇವರನ್ನು ಭೇಟಿ ಮಾಡಿದೆನು. ಅದೇ ವೇಳೆಗೆ ಇನ್ನೊಬ್ಬರು ಮಹದೇವಸ್ವಾಮಿ ಎಂಬ ಗ್ರಂಥಾಲಯ ಸಹಾಯಕರು ಅಲ್ಲಿಗೆ ಬಂದರು. ಆ ಸಮಯದಲ್ಲಿ ಅಲ್ಲೇ ಪಿರ್ಯಾದುದಾರರು ರಾಮದಾಸು ಎಂಬುವವರು ಇದ್ದರು ಅವರನ್ನು ಇನ್ಸ್ ಪೆಕ್ಟರ್ ರವರು ಅವರನ್ನು ಪರಿಚಯ ಮಾಡಿಕೊಟ್ಟರು. ಪಂಚಾಯಿತಿ ರೋಜಗಾರ್

ಯೋಜನೆ ಕಾಮಗಾರಿಯಲ್ಲಿ ಪಂಚಾಯಿತಿ ಸೆಕ್ರಟರಿಯಾದ ಬಸವಲಿಂಗಯ್ಯರವರು ಕಾಮಗಾರಿ ಚೆಕ್ ಕೊಡಲು *10* ಸಾವಿರ ರೂ ದುಡ್ಡು ಕೇಳಿದ್ದಾರೆಂದು ಸದರಿ ಸಂಭಾಷಣೆಯನ್ನು ದೂರುದಾರ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾನೆ ಎಂದು ತಿಳಿಸಿದರು. ಮೊಬೈಲ್ ನಲ್ಲಿಯ ಸಂಭಾಷಣೆಯನ್ನ ನಮಗೆ ಕೇಳಿಸಿದರು. ಸದರಿ ಸಂಭಾಷಣೆಯನ್ನ ಟೈಪ್ ಮಾಡಿಕೊಂಡೆವು. ಮಹದೇವಸ್ವಾಮಿಯವರನ್ನ ಪಂಚ *1* ಎಂದು, ನನ್ನನ್ನು ಪಂಚ *2* ಎಂದು ನೇಮಕ ಮಾಡಿದರು. ಪಿರ್ಯಾದುದಾರರು ಲೋಕಾಯುಕ್ತ ಅಧಿಕಾರಿಗಳಿಗೆ *1*ನೇ ಆರೋಪಿ ವಿರುದ್ದ ದೂರು ಕೊಟ್ಟಿದ್ದರು. ಪಿರ್ಯಾದಿಯನ್ನ ದೂರಿನ ವಿಷಯವನ್ನು ನಾವು ಕೇಳಿ ತಿಳಿದುಕೊಂಡೆವು. ತನಿಖಾಧಿಕಾರಿಯ ಮುಂದೆ *1* ಸಾವಿರ ರೂ ಮುಖ ಬೆಲೆಯ *10* ನೋಟುಗಳನ್ನು ಹಾಜರುಪಡಿಸಿದರು. ತನಿಖಾಧಿಕಾರಿಗಳು ನೋಟುಗಳನ್ನು ಟೇಬಲ್ ಮೇಲೆ ಇಟ್ಟು ಅವುಗಳ ನಂಬರ್, ಮುಖಬೆಲೆ ಇತ್ಯಾದಿಗಳನ್ನು ಒಂದು ಬಿಳಿ ಹಾಳೆಯಲ್ಲಿ ನಾನು ಬರೆದನು ನಾನು ನೋಟ್ ಗಳನ್ನು ನೋಡಿದೆ. ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ನೋಟುಗಳ ವಿವರ ಉಳ್ಳ ಬಿಳಿ ಹಾಳೆಯನ್ನು ಈಗಾಗಲೇ ನಿಪಿ-*2* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*2*ಬಿ ಎಂದು ಗುರುತಿಸಲಾಯಿತು.

*3.* ಸದರಿ ನೋಟುಗಳಿಗೆ ತನಿಖಾಧಿಕಾರಿ ತನ್ನ ಸಿಬ್ಬಂದಿ ಮೂಲಕ ಪೆನಾಪ್ತಲಿನ್ ಪೌಡರ್ ಅನ್ನು ಲೇಪಿಸಿದರು. ನಂತರ ಸದರಿ ನೋಟುಗಳನ್ನು ಪಂಚ *1* ಮಹದೇವಸ್ವಾಮಿಯವರ ಕೈಗೆ ಕೊಟ್ಟರು ನಂತರ ಅವರು ಸದರಿ ನೋಟಿನ ನಂಬರ್ ಮತ್ತು ವಿವರಗಳನ್ನು ತಾಳೆ ಮಾಡಿ ಖಾತರಿ ಪಡಿಸಿಕೊಂಡರು. ಪೆನಾಪ್ತಲಿನ್ ಪೌಡರ್ ನ ಗುಣಧರ್ಮಗಳ ನಮಗೆ ತನಿಖಾಧಿಕಾರಿಗಳು ವಿವರಿಸಿ ಹೇಳಿದರು. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಒಂದು ಕವರ್ ಗೆ ಹಾಕಿ ದೂರುದಾರರಿಗೆ ಕೊಟ್ಟು ಆರೋಪಿ ಬಸವಲಿಂಗಯ್ಯ ಕೇಳಿದಾಗ ಕೊಡಬೇಕು ಎಂದು ತಿಳಿಸಿದರು. ಪಿರ್ಯಾದಿದಾರರಿಗೆ ಪಂಚ *1* ಜೊತೆ ಚನ್ನಪಟ್ಟಣದಲ್ಲಿರುವ ಕೋಟೆ ರಸ್ತೆಯ *1*ನೇ ಅರೋಪಿಯ ಕಛೇರಿಗೆ ಹೋಗಬೇಕೆಂದು ಹೇಳಿದರು. ನಾನು ತನಿಖಾಧಿಕಾರಿ ಮತ್ತು ಸಿಬ್ಬಂದಿ ಜೊತೆ ಇರಬೇಕು ಎಂದು ಹೇಳಿದರು. ಈ ಎಲ್ಲಾ

ಪ್ರಕ್ರಿಯೆಯನ್ನ *3.30* ರಿಂದ *4.00* ಗಂಟೆವರೆಗೆ ಬರವಣಿಗೆ ಮಾಡಿದರು. ಅದಕ್ಕೆ ನಾನು ಸಹಿ ಹಾಕಿದೆನು. ಸಾಕ್ಷಿ ಗುರುತಿಸಿದ ಪ್ರಯೋಗಿಕ ಪಂಚನಾಮೆಯನ್ನು ನಿಪಿ-*18* ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*18* ಬಿ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಈ ಪ್ರಕ್ರಿಯೆಯ ಪೋಟೊಗಳನ್ನು ತೆಗೆಸಿದರು. ಸಾಕ್ಷಿ ಗುರುತಿಸಿದ ಪೋಟೋಗಳನ್ನು ಈಗಾಗಲೇ ನಿಪಿ-*3* ರಿಂದ ನಿಪಿ-*17* ಎಂದು ಗುರುತಿಸಲಾಗಿದೆ.

*4.* ನಾನು ಪಿರ್ಯಾದಿಯ ಜೇಬನ್ನು ಪರೀಕ್ಷೆ ಮಾಡಿ ಜೇಬಿನಲ್ಲಿ ಏನು ಇಲ್ಲ ಎಂದು ಖಾತರಿ ಪಡಿಸಿದ ನಂತರ ಪಂಚ *1* ರವರು *1* ಸಾವಿರದ *10* ನೋಟುಗಳನ್ನು ಪಿರ್ಯಾದಿಯ ಜೇಬಿನಲ್ಲಿ ಇಟ್ಟರು.

*5.* ಸಂಜೆ *4.30* ಗಂಟೆಗೆ ಲೋಕಾಯುಕ್ತ ಸಿಬ್ಬಂದಿ, ತನಿಖಾಧಿಕಾರಿಯೊಂದಿಗೆ ನಾನು ಜೀಪ್ ನಲ್ಲಿ ಕೋಟೆ ರೋಡ್ ನ ಕಾರ್ನರ್ ನಲ್ಲಿ ಹೋಗಿ ನಿಂತೆವು ಪಂಚ-*1* ಇವರನ್ನು ಕರೆದುಕೊಂಡು ಲೋಕಾಯುಕ್ತ ಸಿಬ್ಬಂದಿ ಆರೋಪಿಯ ಕಛೇರಿಯ ಹತ್ತಿರ ಹೋದರು. ನಾವು ಇನ್ಸ್ ಪೆಕ್ಟರ್ ಜೊತೆಯಲ್ಲಿ ಸುಮಾರು *50-60* ಅಡಿ ದೂರದಲ್ಲಿ ಇದ್ದು ಗಮನಿಸುತ್ತಿದ್ದೆವು. ಸಂಜೆ *6.15-6.30* ಗಂಟೆಗೆ ಪಂಚ *1* ಮತ್ತು ಪಿರ್ಯಾದಿ ಜೊತೆ ಹೋಗಿದ್ದ ಪೋಲೀಸ್ ಇನ್ಸ ಪೆಕ್ಟರ್ ನಮ್ಮ ಜೀಪ್ ಹತ್ತಿರ ಬಂದು ಅರೋಪಿಯನ್ನ ಟ್ರಾಪ್ ಮಾಡಿದ್ದೇವೆ ಅಂತ ಹೇಳಿದರು ಆಗ ನಾವು ಇನ್ಸ ಪೆಕ್ಟರ್ ಜೊತೆಗೆ ಆನಂದ್ ಎಲೆಕ್ಟ್ರಿಕಲ್ ಅಂಗಡಿಯ ಹತ್ತಿರ ಹೋದೆವು. ಅಲ್ಲಿ ಹೋಗಿ ಆನಂದ್ ಇವರನ್ನ ತನಿಖಾಧಿಕಾರಿ ವಿಚಾರಿಸಿ ನಿಮಗೆ ಯಾರು ಹಣ ಕೊಟ್ಟರು ಎಂದು ಕೇಳಿದರು. ಅದಕ್ಕೆ ಅವರು ಪಿರ್ಯಾದಿ ಕೊಟ್ಟಿದ್ದಾನೆ ಎಂದು ಹೇಳಿದರು. ಸೆಕ್ರೆಟರಿ ಅವರು ಹಣ ತೆಗೆದುಕೋ ಎಂದು ಹೇಳಿದ್ದರಿಂದ ನಾನು ಹಣ ತೆಗೆದುಕೊಂಡಿದ್ದಾಗಿ ಆರೋಪಿ ಅನಂದ ತಿಳಿಸಿದ.

*6.* ನಾನು ಪಂಚ-*1* ಮತ್ತು ಪಿರ್ಯಾದಿಯನ್ನ ವಿಚಾರಿಸಿದೆ ಅದಕ್ಕೆ ಪಿರ್ಯಾದಿ ಬಸವಲಿಂಗಯ್ಯ ಇವರು ಆನಂದ್ ಇವರಿಗೆ ಹಣ ತೆಗೆದುಕೋ ಎಂದು ಹೇಳಿದ್ದರಿಂದ ಆನಂದ್ ರವರು ನನ್ನಿಂದ ಹಣವನ್ನು ಕೇಳಿ ಪಡೆದುಕೊಂಡರು

ಎಂದು ಹೇಳಿದರು. ಸದರಿ ಆರೋಪಿ ಆನಂದ ಇಂದು ನ್ಯಾಯಾಲಯದಲ್ಲಿ ಇರುತ್ತಾರೆ.

*7.* ಆರೋಪಿ ಆನಂದ ತನ್ನ ಪ್ಯಾಂಟಿನ ಎಡಗಡೆ ಜೇಬಿನಿಂದ ಹಣವನ್ನು ತೆಗೆದು ತನಿಖಾಧಿಕಾರಿ ಕೈಗೆ ಕೊಟ್ಟರು. ಸದರಿ ನೋಟುಗಳನ್ನ ನಿಪಿ-*2* ರ ಜೊತೆ ತಾಳೆ ಮಾಡಿ ನೋಡಿದಾಗ ಪಿರ್ಯಾದಿ ಪ್ರಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟ ನೋಟುಗಳು ಅಗಿದ್ದವು. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಒಂದು ಕವರ್ ನಲ್ಲಿ ಹಾಕಿ ಸೀಲ್ ಮಾಡಿ ವಶಪಡಿಸಿಕೊಂಡರು. ಶರ್ಟಿನ ಜೇಬನ್ನ ಒಂದು ದ್ರಾವಣದಲ್ಲಿ ತೊಳೆಸಿದರು ಅದು ನೀಲಿ ಬಣ್ಣಕ್ಕೆ ತಿರುಗಿತು. ಬಣ್ಣ ಬದಲಾವಣೆ ಆಯಿತು ಆದರೆ ಯಾವ ಬಣ್ಣ ಎಂದು ನೆನಪಿಲ್ಲ ಎಂದು ಸಾಕ್ಷಿ ಪುನಃ ಹೇಳುತ್ತಾರೆ. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಸ್ವಾಧೀನ ಪಡಿಸಿಕೊಂಡರು. ಸಾಕ್ಷಿ ಗುರುತಿಸಿದ ಸದರಿ ಬಾಟಲಿಯನ್ನು ಮು ಮಾಲು *5* ಎಂದು ಗುರುತಿಸಲಾಯಿತು. ಆರೋಪಿ ಆನಂದ್ ಈತನ ಶರ್ಟ್ ಅನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡರು ಸಾಕ್ಷಿ ಗುರುತಿಸಿದ ಶರ್ಟ್ ಅನ್ನು ಈಗಾಗಲೇ ಮು ಮಾ *3* ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಲೋಕಾಯುಕ್ತ ಪೋಲೀಸರು ಪೋಟೊಗಳನ್ನು ತೆಗೆಸಿದ್ದಾರೆ. ಸಾಕ್ಷಿ ಗುರುತಿಸಿದ ಪೋಟೋಗಳನ್ನು ನಿಪಿ-*19* ರಿಂದ ನಿಪಿ-*31* ಎಂದು ಗುರುತಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಮಹಜರು ಮಾಡಿದರು. ಸಾಕ್ಷಿ ಗುರುತಿಸಿದ ಮಹಜರನ್ನು ಈಗಾಗಲೇ ನಿಪಿ-*32* ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-*32* ಬಿ ಎಂದು ಗುರುತಿಸಲಾಯಿತು.

*8.* ನಂತರ ಆರೋಪಿ ಆನಂದ್ ಇತನೊಂದಿಗೆ ಲೋಕಾಯುಕ್ತ ಸಿಬ್ಬಂದಿ ನಾವು ಲೋಕಾಯುಕ್ತ ಕಛೇರಿಗೆ ಬಂದೆವು. ಅಂದು *1* ನೇ ಅರೋಪಿ ಸಿಗದೇ ಇದ್ದ ದ್ದರಿಂದ ಮರುದಿವಸ ಬನ್ನಿ ಎಂದು ತನಿಖಾಧಿಕಾರಿಗಳು ನನಗೆ ತಿಳಿಸಿದರು.

*9.* ಮಾರನೇ ದಿವಸ ನಾನು ಮತ್ತು ಪಂಚ-*1* ಲೋಕಾಯುಕ್ತ ಕಛೇರಿಗೆ ಹೋಗಿದ್ದೆವು, ಆಗ *1* ನೇ ಅರೋಪಿ ಬಸವಲಿಂಗಯ್ಯ ಅಲ್ಲಿಗೆ ಬಂದರು.

ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಿಚಾರಿಸಿ ಕೋರ್ಟ್ ಗೆ ಕರೆದುಕೊಂಡು ಹೋದರು.

*10.* ಪಿರ್ಯಾದಿಗೆ ಸಂಬಂದಪಟ್ಟ ದಾಖಲೆಗಳನ್ನು ಪೋಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಆನಂತರ ಲೋಕಾಯುಕ್ತ ಪೋಲೀಸರು ನನ್ನನ್ನು ಲೋಕಾಯುಕ್ತ ಕಛೇರಿಗೆ ಕರೆಸಿಲ್ಲ.

*11.* ಲೋಕಾಯುಕ್ತ ಅಧಿಕಾರಿಗಳು ನನ್ನ ಹೇಳಿಕೆಯನ್ನು ಮಾರನೇ ದಿನ ಪಡೆದುಕೊಂಡಿರುತ್ತಾರೆ.

**ವಿಶೇಷ ಅಭಿಯೋಜಕರ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**